ಊರವರು ಅಂದುಕೊಂಡಂತೆ ಮಾದೇವಿಯನ್ನು ಪಾಲಯ್ಯ ಲಗ್ನವಾಗಲು ಕಾರಣ ಅವನು ಕೊಂಚ ಬೆಪ್ಪನಾಗಿದ್ದುದೇ ಆಗಿತ್ತು. ಅವನಿಗೆ ದನ ಕಾಯುವುದರ ಬಿಟ್ಟು ಬೇರೆ ಯಾವುದೇ ಕೆಲಸ ಅಷ್ಟಾಗಿ ಬರುತ್ತಿರಲಿಲ್ಲ. ಇಷ್ಟು ಮೇಲೆ ದೊಡ್ಡ ತಮ್ಮಯ್ಯನವರೇ ಆದಿಯಾಗಿ ಊರ ಹಿರಿಯರನೇಕರಿಗೆ, ಮಾದೇವಿ ಪಾಲಯ್ಯನ ಲಗ್ನವಾದುದು ಅಷ್ಟು ಸಮಾಧಾನದ ಸಂಗತಿಯಾಗಿರಲಿಲ್ಲ. ಯಾಕೆಂದರೆ ಸಮಯ ಕಾಯ್ದು ತಾವೇ ಅವಳನ್ನು ಸರಿಮಾಡಿಕೊಳ್ಳಬಹುದಾಗಿತ್ತಲ್ಲ ಎಂಬುದು ಅವರೆಲ್ಲರ ಒಳ ಮನಸ್ಸಾಗಿತ್ತು. ಈಗಲೂ ಅಂಥ ಅವಕಾಶವೇನೂ ತಪ್ಪಿಲ್ಲ ಎಂಬ ಭರವಸೆಯಿಂದಲೇ ಇದ್ದರು.

ಒಟ್ಟಿನಲ್ಲಿ ಮಾದೇವಿ ಲಗ್ನವಾದ ದಿನವೇ ಗಂಡಿನ ಗುಡಿಸಿಲಿಗೆ ಬಂದಳು. ಚಿರತೆ ಬಯಲಲ್ಲಿ ಹುಟ್ಟಿ ಹೇಗೋ ಬೆಳೆದು, ದೊಡ್ಡ ತಮ್ಮಯ್ಯನವರು ಕರೆಯಲು ಕರಡಿ ಕಣಿವೆಗೆ ಬಂದು ಅವರ ಹಟ್ಟಿಯ ದನ ಕಾಯುತ್ತ ಬೀದಿಯ ತುದಿಗೆ ವಾಸವಾಗಿದ್ದ ಪಾಲಯ್ಯನಲ್ಲಿಗೆ ಬಂದ ಮಾದೇವಿ ತತಾತೂತಾಗಿದ್ದ ಗುಡಿಸಿಲ ಸಂದುಗೊಂದನ್ನೆಲ್ಲ ಗೋಣಿಪಾಟಿನಿಂದ ಮುಚ್ಚಿದಳು. ಸೆಗಣಿ ತಂದು ನೆಲಕ್ಕಿಟ್ಟು ಸಾರಿಸಿದಳು. ದಂಡೆಪಂಡೆ ಹಟ್ಟಿಯವರಿಂದ ಹುಡಿ ಈಸಿಕೊಂಡು ಬಂದು ಗುಡಿಸಿಲ ಮುಂದೆ ರಂಗೋಲಿ ಬಿಟ್ಟಳು. ಅಷ್ಟೇನೂ ಚುರುಕಲ್ಲದ, ಕೆಟ್ಟವನು ಮಾತ್ರವಲ್ಲದ ಪಾಲಯ್ಯ ಹೊತ್ತು ನಾಕುಮಾರು ಏರುತ್ತಿದ್ದಂತೆ ಒಂದು ಮುದ್ದೆ ಉಂಡು, ಇನ್ನೊಂದ ವಲ್ಲಿಯ ತುದಿಗೆ ಕಟ್ಟಿಕೊಂಡು ದನಗಳ ಹಿಂದೆ ಹೋಗುವ. ಇತ್ತ ದಿನವೆಲ್ಲ ಮಾದೇವಿ ನೆರುಕೆಯೊಳಗೇ ಇದ್ದು ಅದು ಇದು ಕೆಲಸ ಮಾಡುತ್ತಲೇ ಇದ್ದರೂ ಹೊತ್ತು ನೆತ್ತಿಯ ದಾಟಿದ ಮೇಲೆ ಕೈ ಖಾಲಿಯಾಗಿಬಿಡುತ್ತಿತ್ತು. ಆಗ ಹಟ್ಟಿ ಮುಂದೆ ಒಂದು ಘಳಿಗೆ ಕೂರುವಳು. ಊರ ದನ ಕಾಯುವ ಬೆಪ್ಪನನ್ನು ಕಟ್ಟಿಕೊಂಡ ಮಾದೇವಿ ಹಟ್ಟಿ ಮುಂದೆ ಕೂರುವುದು ಯಾಕೆ ಅಂದು ಗುಮಾನಿ ಹತ್ತಿಸಿಕೊಂಡ ಊರ ಪ್ರಾಯಸ್ಥರು, ಯಜಮಾನರು ತಮ್ಮ ತೋಟ ತುಡಿಕೆಗಳಿಗೆ ಹೋಗಬೇಕಾದಲ್ಲಿ ಮಾಮೂಲು ಹಾದಿ ತಪ್ಪಿಸಿ ಪಾಲಯ್ಯನ ಹಟ್ಟಿಯ ಹಾದಿ ಹಿಡಿದರು. 'ಏನವ್ವ ಮಾದೇವಿ, ಯಾಗಿದ್ದದು ಸಂಸಾರ' ಅನ್ನುವ ಒಂದು ಮಾತು ಆಡಿ, ಪ್ರೀತಿಯಿಂದ ನಕ್ಕು ಮುಂದಾಗುತ್ತಿದ್ದರು. ಮಾದೇವಿಗೆ ಎಲ್ಲರ ಪ್ರೀತಿ ಅರಿವಾಗುತ್ತಲೇ ಗುಡಿಸಲ ಮುಂದೆ ಕೂರುವುದು ಬಿಟ್ಟಳು. ಒಂದು ರಾತ್ರಿ ಗಂಡನ ಮುಂದೆ ತಾನೂ ಕೇರಿಯ ಹೆಂಗಸರೊಂದಿಗೆ ಕೂಲಿನಾಲಿಗೆ ಹೋಗುವುದಾಗಿ ಹೇಳಿದಳು. ಪಾಲಯ್ಯ ಬೇಡವೆಂದ.

**ಮಾದೇವಿ ನನ್ನ ಮುಖವನ್ನು ಗುರುತಿಸುವುದಕ್ಕಿಂತ ಮೊದಲು ಧ್ವನಿಯಲ್ಲೇ ಹಿಡಿದುಬಿಟ್ಟವಳಂತೆ 'ಕಿಟ್ಟಣ್ಣಾ' ಅಂದಳು. ಅವಳ ಧ್ವನಿಯಲ್ಲಿ ದೈನ್ಯತೆಯೂ, ಎಷ್ಟೋ ದಿನಗಳ ಸ್ನೇಹವೂ, ವಿಶ್ವಾಸವೂ ಇತ್ತು.**

ಹೀಗೆ ಮಾದೇವಿಯ ಸಂಸಾರ ತೊಡಗಿ ನಾಕಾರು ತಿಂಗಳು ಕಳೆದಿರಬೇಕು. ಯುಗಾದಿ ಹಬ್ಬವು ಬಂದು ಅದರ ಮಾರನೆಗೆ ಕಾರಯ್ಯ ಸ್ವಾಮಿಯ ಪರ್ಸೆಗೆಂದು ಸಕಲೆಂಟು ಗ್ರಾಮಗಳು ಹೊಂಟಂತೆ ಇತ್ತ ಕರಡಿ ಕಣಿವೆಯಿಂದಲೂ ಹತ್ತಾರು ಗಾಡಿಗಳು ಹರಿದವು. ಎಲ್ಲ ಗಾಡಿಗಳಿಗಿಂತ ಮುಂದೆ